ಕಾರ್ಯಪಾಲಕ ಅಭಿಯಂತರರ ಕಛೇರಿ
ಲೋಇ, ಬೆಂಗಳೂರು ವಿಭಾಗ,
ಲೋಇ ಅನೆಕ್ಸ್ ಕಟ್ಟಡ 1ನೇ ಮಹಡಿ
ಕೆಆರ್ ವೃತ್ತ ಬೆಂಗಳೂರು 01

ದೂರವಾಣಿ : 080-22133370
ಫ್ಯಾಕ್ಸ್: 080-22133365
ಇ ಮೇಲ್:eepwdbngdn@yahoo.com

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಸಂಖ್ಯೆ:ಕಾಅಿಅಂ:ಬೆಂವಿ:ಎಇ-1:2022-23 6452 ದಿನಾಂಕ : 10/4/2023

ರವರಿಗೆ

"ನೊಂದಾಯಿತ ಅಂಚೆ ಮತ್ತು ಸ್ವೀಕೃತಿ"

Secretary,
Edify School,
(Vasavi Vidyanikethan Trust),
Sy. No. 226/227, Somanahalli, Kanakapura Main Raod,
Bangalore 560082

ಮಾನ್ಯರೇ,

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, Sy. No. 226/227, Somanahalli, Kanakapura Main Road ಬೆಂಗಳೂರು ರಲ್ಲಿರು **Edify School,** (Vasavi Vidyanikethan Trust), ಶಾಲಾ ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ:
1. ದಿನಾಂಕ: 19.09.2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
2. ಸರ್ಕಾರದ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ: 07.05.2022
3. ತಮ್ಮ ಮನವಿ ಪತ್ರ ದಿನಾಂಕ:13.02.2023
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: 2022-23/1077 ದಿನಾಂಕ:29.03.2023

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, Sy. No. 226/227, Somanahalli, Kanakapura Main Road ಬೆಂಗಳೂರು ರಲ್ಲಿರುವ **Edify School,** (Vasavi Vidyanikethan Trust), ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ಶಿಕ್ಷಣ ಇಲಾಖೆಗೆ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (3) ರ ಪತ್ರದಲ್ಲಿ ಕೋರಿರುತ್ತೀರಿ.

ರಿಟ್ ಪಿಟೀಷನ್ (ಸಿವಿಲ್) ಸಂ: 484 (2004) ಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಲಾದ ಜಡ್ಜ್‌ಮೆಂಟ್‌ನಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ರವರು ಶಾಲಾ/ಕಾಲೇಜು ಕಟ್ಟಡಗಳನ್ನು ಪರಿಶೀಲಿಸಿ **"Structurally Stable Certificate"** ಅನ್ನು ನೀಡಲು ಆದೇಶಿಸಿರುವುದರಿಂದ ಹಾಗೂ ಉಲ್ಲೇಖ (1) ರ ಸಭಾ ನಡವಳಿಯ ನಿರ್ದೇಶನದಂತೆ ಈಗಾಗಲೇ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural Evaluation) ಮೌಲ್ಯಮಾಪನ ಮಾಡಿ National Building code ಮಾನದಂಡಗಳ ಅನ್ವಯ ಪ್ರಮಾಣ ಪತ್ರ ನೀಡಲು ಸೂಚಿಸಿರುವುದರಿಂದ ಪ್ರಸ್ತಾಪಿತ ಕಟ್ಟಡದ ಸ್ಟ್ರಕ್ಚರಲ್ ಪರೀಕ್ಷೆಗಳನ್ನು ನಡೆಸಿ ಈ ಕೆಳಕಂಡಂತೆ ವರದಿ ನೀಡಲಾಗಿದೆ.

ಸದರಿ ಕಟ್ಟಡದ ನಕ್ಷೆಗೆ ಸದಸ್ಯ ಕಾರ್ಯದರ್ಶಿ, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ, ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ರವರು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡವು ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಗಳನ್ನು ಒಳಗೊಂಡಿದ್ದು, 2017ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತ್ತಾರೆ.

ಮುಂದುವರೆದು, ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಶಾಲಾ ಸಂಸ್ಥೆಯವರು ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ ಜನವರಿ 2023 ರ ಮಾಹೆಯಲ್ಲಿ **Bangalore University, Department of Civil Engineering, UVCE, Jnanabharathi Campus, Bangalore-560056 ((Nishicon Infrastructures)** ಮುಖಾಂತರ ಪರೀಕ್ಷೆಗಳನ್ನು ಕೈಗೊಂಡಿರುವ ಪರೀಕ್ಷಾ ವರದಿಯ ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ಸಲ್ಲಿಸಿರುತ್ತಾರೆ. ಸದರಿ ನಡೆಸಲಾದ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡು ಬಂದಿರುತ್ತದೆ.

ಅನುಬಂಧ (2) ರ ನಮೂನೆಯ ಪತ್ರದಲ್ಲಿ ಸಂಬಂಧಿಸಿದಂತೆ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರವನ್ನು ಪಡೆಯಲು ಮೊತ್ತ ರೂ. 5,000/- (ರೂ. ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬೆಂಗಳೂರು ದಕ್ಷಿಣ ತಾಲ್ಲೂಕು, Sy. No. 226/227, Somanahalli, Kanakapura Main Road, ಬೆಂಗಳೂರು ಇಲ್ಲಿನ **Edify School,** (Vasavi Vidyanikethan Trust), ಶಾಲೆ ರವರು SBI Bank, ಡಿ.ಡಿ. 612806 ಸಂಖ್ಯೆ ದಿನಾಂಕ:20.02.2023 ರಲ್ಲಿ ಪಾವತಿಸಿರುತ್ತಾರೆ.

- **Edify School,** (Vasavi Vidyanikethan Trust), ಬೆಂಗಳೂರು ದಕ್ಷಿಣ ತಾಲ್ಲೂಕು, Sy. No. 226/227, Somanahalli, Kanakapura Main Road ಬೆಂಗಳೂರು ಇಲ್ಲಿ ನಿರ್ಮಿಸಲಾಗಿರುತ್ತದೆ ಎಂದು ಶಾಲಾ ಸಂಸ್ಥೆಯವರು ಮನವಿ ಪತ್ರದಲ್ಲಿ ತಿಳಿಸಿರುತ್ತಾರೆ.
- ಸದಸ್ಯ ಕಾರ್ಯದರ್ಶಿ, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ, ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ರವರಿಂದ ಅನುಮೋದಿತ ನಕ್ಷೆಗಳನುಸಾರವಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತ್ತಾರೆ.

ಸದರಿ ಕಟ್ಟಡದ ಭೌತಿಕ ಸ್ಥಿತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ಪರಿಶೀಲಿಸಲಾಗಿ, ಕಟ್ಟಡಕ್ಕೆ ಕಾಲಕಾಲಕ್ಕೆ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುವ ಅವಶ್ಯಕತೆ ಇರುತ್ತದೆ. ಕಟ್ಟಡದಲ್ಲಿ ಉಂಟಾಗಿರುವ Dampness ಮತ್ತು ಗೋಡೆಗಳಲ್ಲಿರುವ Cracks ಗಳನ್ನು ದುರಸ್ತಿ ಪಡಿಸಿ, ಕಟ್ಟಡಕ್ಕೆ ಬಣ್ಣದ ಕೆಲಸವನ್ನು ಮಾಡುವ ಷರತ್ತಿಗೆ ಒಳಪಟ್ಟು ಶೈಕ್ಷಣಿಕ ಉದ್ದೇಶಕ್ಕೆ ಉಪಯೋಗಿಸಬಹುದಾಗಿದೆಂದು ವರದಿಸಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, **Bangalore University, Department of Civil Engineering, UVCE, Jnanabharathi Campus, Bangalore-560056 ((Nishicon Infrastructures)** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪರೀಕ್ಷಾ ವರದಿಯನ್ನು ಪರಿಗಣಿಸಿ, ಹಾಗೂ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡ ನೀಡಿರುವ ವರದಿಯನ್ವಯ ಬೆಂಗಳೂರು ದಕ್ಷಿಣ ತಾಲ್ಲೂಕು, Sy. No. 226/227, Somanahalli, Kanakapura Main Road ಬೆಂಗಳೂರು ಇಲ್ಲಿನ **Edify School,** (Vasavi Vidyanikethan Trust), ಶಾಲಾ ಕಟ್ಟಡಗಳು ಪ್ರಸಕ್ತ ಶೈಕ್ಷಣಿಕ ಸಾಲಿಗೆ **Structurally Stable** ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಅದರಂತೆ, ಪ್ರಸ್ತುತ ಕಟ್ಟಡದ Non - Structural Elements (Infrastructural facilities) ಗೆ ಸಂಬಂಧಿಸಿದಂತೆ, ಸಿವಿಲ್ ಇಂಜಿನಿಯರ್, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಮನಶಾಸ್ತ್ರಜ್ಞ, ಅಗ್ನಿಶಾಮಕ ಅಧಿಕಾರಿ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳನ್ನೊಳಗೊಂಡ ಪರೀಕ್ಷಾ ತಂಡದವರಿಂದ ಪರಿಶೀಲಿಸಿ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ "Fire safety Certificate" ಅನ್ನು ಮಾನ್ಯ ಅಗ್ನಿಶಾಮಕ ಅಧಿಕಾರಿಯಿಂದ ಪಡೆಯತಕ್ಕದ್ದು.

ತಮ್ಮ ವಿಶ್ವಾಸಿ,

ಸಹಿ/-

ಕಾರ್ಯಪಾಲಕ ಅಭಿಯಂತರರು,
ಲೋ.ಇ., ಬೆಂಗಳೂರು ವಿಭಾಗ,
ಬೆಂಗಳೂರು.

by email